


# ಆಯ್ಯೋ... ವೀಸಾನೂ ಇದೆಯಾ?

★ ಎನ್. ರಾಮನಾಥ್

**ಸಾಲ ಬೇಕಾಗಿತ್ತು ಎಂದೆ.**

ಏನು ಮಾಡ್ಕೊಂಡಿದ್ದೀರಿ? ಕೇಳಿದರು ಹರಹರ ನಾನ್‌ಕೋಆಪರೇಟಿವ್ ಬ್ಯಾಂಕ್‌ನ ಮ್ಯಾನೇಜರ್.

ಕೈಸಾಲ

ಅದಲ್ಲ, ಜೀವನಕ್ಕೆ ಏನು ಮಾಡಿಕೊಂಡಿದ್ದೀರಿ?

ಸಾಹುಕಾರನ ಮಗಳೊಡನೆ ಮದುವೆ ಮಾಡಿಕೊಂಡಿದ್ದೇನೆ.

ಕೆಲಸ ಏನು ಮಾಡ್ತಿದ್ದೀರಿ?

ಹೆಂಡತಿ ಹೇಳಿದ ಎಲ್ಲ ಕೆಲಸವನ್ನೂ ಮಾಡ್ತಿದ್ದೀನಿ ಎಂದೆ. ಪಕ್ಕದಲ್ಲಿದ್ದ ಮಡದಿ ಸಮ್ಮತಿಯ ನಸುನಗೆ ಬೀರಿದಳು.

ನಿಮ್ಮ ಮಾವ ಸಾಹುಕಾರರು ಎಂದರೆ ನಿಮಗೇಕೆ ಸಾಲ?

ಮದುವೆಯಾದಾಗ ಸಾಹುಕಾರರಾಗಿದ್ದರು. ನಂತರ ಎಲೆಕ್ಷನ್‌ಗೆ ನಿಂತರು ವಿವರಿಸಿದಳು ಮಡದಿ.

ಸರಿ. ಸಾಲ ಏಕೆ ಬೇಕು?

ಮೋದಿ ಝೆರಾಕ್ಸ್ ಅಂಗಡಿ ತೆರೆಯಲು

ಮ್ಯಾನೇಜರ್ ಕೂಡಲೆ ಎಕ್ಸಿಟ್‌ನತ್ತ ಬೆರಳು ತೋರಿಸುತ್ತ ಗೆಟೌಟ್ ಎಂದರು. ಕಕ್ಕಾಬಿಕ್ಕಿಯಾದ ನಾನು ಏಕೆ ಸಾರ್? ಎಂದೆ.

ಚಲಿತ್ ಮೋದಿಯಿಂದ ಒಂದಷ್ಟು ಬ್ಯಾಂಕುಗಳು ನೆಲ ಕಚ್ಚಿದವು. ಘೋರವ ಮೋದಿಯಿಂದ ಮತ್ತಷ್ಟು ಶಾಖೆಗಳು ಶಾಖ ಅನುಭವಿಸಿದವು. ಒರಿಜಿನಲ್ ಮೋದಿಗಳಿಂದ ಆಗುವ ತೊಂದರೆಗಳು ಸಾಲದೆಂದು ಆ ಮೋದಿಗಳ ಝೆರಾಕ್ಸ್‌ಗಳನ್ನು ತಯಾರಿಸುವ ಕಂಪನಿ ಆರಂಭಿಸುತ್ತೇನೆಂದರೆ ಸಾಲ ಕೊಡಲು ನನಗೇನು ಹುಚ್ಚುನಾಯಿ ಕಚ್ಚಿದೆ ಅಂದ್ಕೊಂಡ್ರಾ? ಹರಿಹಾಯ್ದರು ಮ್ಯಾನೇಜರ್.

ಕ್ಷಮಿಸಿ. ಪರ್ಪಾಟಾಯಿತು. ಆ ಮೋದಿಗಳ ಪ್ರತಿಗಳನ್ನು ತಯಾರಿಸುವ ಉದ್ಯೋಗವಲ್ಲ; ಆಟೋ ಝೆರಾಕ್ಸ್ ಸೆಂಟರ್‌ಗಾಗಿ ಸಾಲ ಕೇಳುತ್ತಿದ್ದೇನೆ.

ಅಡ್ಡಾದಿಡ್ಡಿ ಚಲಿಸುವ ಒರಿಜಿನಲ್ ಆಟೋಗಳೇ ಅಷ್ಟೊಂದು ಇರುವಾಗ ಅದರ ನಕಲಿಗಳೂ ಸೇರಿಬಿಟ್ಟರೆ ರಸ್ತೆಯಲ್ಲಿ ಹೋದಂತೆಯೇ. ಊಹೂಂ. ಬೇರೆ ಯಾವುದಾದರೂ ಪ್ರಾಜೆಕ್ಟ್ ಇದ್ದರೆ ಹೇಳಿ – ಎನ್ನುತ್ತಾ ಮತ್ತೆ ಎಕ್ಸಿಟ್ ಕಡೆಗೆ ಬೆರಳು ಮಾಡಿದರು.

ಕುಳಿತಲ್ಲಿಂದಲೇ ಮಾವನಿಗೆ ಫೋನಾಯಿಸಿದೆ. ಮಾವ ವಿತ್ತಸಚಿವನ ಆಪ್ತಕಾರ್ಯದರ್ಶಿಯ ಅನುನಾಯಿಗೆ ಫೋನಾಯಿಸಿದ. ಅನುನಾಯಿ ಮ್ಯಾನೇಜರರ ಫೋನಲ್ಲಿ ಗೊರ್ ಎಂದಿತು.

ಸರಿ. ನಿಮ್ಮ ಬಳಿ ಇರುವ ದಾಖಲೆಗಳನ್ನು ಕೊಡಿ– ಎಂದರು ಮ್ಯಾನೇಜರ್.

ಮೊದಲಿಗೆ ಬರ್ತ್ ಸರ್ಟಿಫಿಕೇಟ್ ನೀಡಿದೆ. ನೀವು ಹುಟ್ಟಿದ ಮೇಲೆ ನಿಮ್ಮ ಜಾತಿ ಮೂರು ಭಾಗವಾಗಿ ವಿಂಗಡಣೆಯಾಗಿದೆ. ಅದರಲ್ಲಿ ಯಾವ ಪಂಥ?–